# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
# ಅಫಜಲಪೂರ

ಸಿಸಿ ನಂ. 132/2016

ಚಾಸಾ-08 ಪ್ರಾಸಾ-09

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 04.09.2024

ಹೆಸರು : ಜಾನಪ್ಪ

ತಂದೆಯ ಹೆಸರು : ಲಗಮಣ್ಣ

ವಯಸ್ಸು : 45 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಕರಜಗಿ ಗ್ರಾಮ

: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ** :

ಚಾಸಾ-1,4 ರವರ ಪರಿಚಯ ಇರುತ್ತದೆ. ಹೊಲದಲ್ಲಿ ಜಗಳವಾಡಿದ್ದು ಇರುತ್ತದೆ, ಆ ನಂತರ ಮನೆಗೆ ಬಂದಾಗ ಆರೋಪಿತರು ಚಾಸಾ-1 ರವರಿಗೆ 1 ನೇ ಆರೋಪಿಯು ಹೊಡೆದಿರುತ್ತಾನೆ. ಬರುವಾಗ ಕೈಯಲ್ಲಿ ಕೊಡಲಿ ಹಿಡಿದುಕೊಂಡು ಬಂದಿದ್ದು, ಕೊಡಲಿ ಕಾವಿನಿಂದ ನನ್ನ ತಮ್ಮ ಚಾಸಾ-1 ರವರಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ, ಆಗ ಜನ ಸೇರಿದ್ದು ನಾವು ಹೋಗಿ ನೋಡಿದಾಗ ತಲೆಯಿಂದ ರಕ್ತಸ್ರಾವ ಆಗುತ್ತಿತು. ಆ ನಂತರ ಚಾಸಾ-1 ರವರನ್ನು ಅಫಜಲಪೂರದ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ದಾಖಲು ಮಾಡಿರುತ್ತೇವೆ. ಆ ನಂತರ ಪೋಲಿಸ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರು ನೀಡಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಒಂದು ಕೊಡಲಿ ಕಾವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಶ್ರೀ ಡಿ.ಎಂ.ಡಿ. ವಕೀಲರಿಂದ**

ನನಗೆ ಓದಲು ಮತ್ತು ಬರೆಯಲು ಸ್ವಲ್ಪ-ಸ್ವಲ್ಪ ಬರುತ್ತದೆ. ಚಾಸಾ-1 ನನ್ನ ಖಾಸ ತಮ್ಮ ಇರುತ್ತಾನೆ. ಚಾಸಾ-1 ರವರು ಹೊಲದಲ್ಲಿ ವಾಸವಾಗಿರುತ್ತಾರೆ ನಾನು ಊರಿನಲ್ಲಿ ವಾಸವಾಗಿರುತ್ತೇನೆ. ಈ ವಿಷಯವನ್ನು ನಾನು ಪೋಲಿಸರ ಮುಂದೆ ತಿಳಿಸಿರುತ್ತೇನೆ. ಚಾಸಾ-1 ರವರು ಆರೋಪಿತರ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯು ಊಡಚಣ ರಸ್ತೆಗೆ ಇರುತ್ತದೆ. ಆರೋಪಿತರಿಗೂ ಮತ್ತು ಚಾಸಾ-1 ರವರಿಗೆ ಆದ ಜಗಳದ ದಿನಾಂಕ ಹೇಳಲು ಬರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನಿಖರವಾದ ದಿನಾಂಕ ಹೇಳಲು ಬರುವುದಿಲ್ಲಾ ಆದರೆ 2016 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಯಾವ ಸಮಯಕ್ಕೆ ಜಗಳವಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸಾಂಯಕಾಲ 05.30 ಗಂಟೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ಪೋಲಿಸರ ಮುಂದೆ ಹೇಳಿರುತ್ತೇನೆ.

ಚಾಸಾ-1 ರವರನ್ನು ಸರಕಾರಿ ಆಸ್ಪತ್ರೆಯಲ್ಲಿ ದಾಖಲು ಮಾಡಿದಾಗ ಸಮಯ ರಾತ್ರಿ 08.30 ರಿಂದ 09.00 ಗಂಟೆ ಆಗಿತ್ತು, ನಂತರ ನಾವು ಕಲಬುರಗಿಗೆ ಹೋಗಿದ್ದು 2-3 ದಿನಗಳ ನಂತರ ಡ್ಸಿರ್ಚಾಜ ಮಾಡಿರುತ್ತಾರೆ. ಪೋಲಿಸರ ಮುಂದೆ ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ. ಘಟನೆಯಾದ ದಿನವೇ ರಾತ್ರಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಮು.ಮಾ-1 ರಿಂದ ಹೊಡೆದಿರುತ್ತಾರೆ ಎಂದರೆ ಸರಿ. ಅದಕ್ಕೆ ಕೊಡಲಿ ಇರಲಿಲ್ಲಾ ಎಂದರೆ ಸರಿ. ಚಾಸಾ-1 ಮತ್ತು ಆರೋಪಿತರ ನಡುವೆ ಯಾವುದೇ ಜಗಳವಾಗಿಲ್ಲಾ ಎಂದರೆ ಸರಿಯಲ್ಲ. ಈ ಪ್ರಕರಣದ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯವು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ